e ಜೀವನ

# ಬಿಲ್ ಬಿಟ್ಟ ಬಾಣ

ಬಿಲ್ ಗೇಟ್ಸ್‌ನ ಈ ಬಾರಿಯ ಭಾರತ ಭೇಟಿ ಭಾರತೀಯ ವ್ಯಾಪಾರ ಮತ್ತು ವಾಣಿಜ್ಯೋದ್ಯಮಗಳಿಗೆ ಹೊಸ ಬಾಗಿಲುಗಳನ್ನು ತೆರೆಯುವುದರಲ್ಲಿ ಯಶಸ್ವಿಯಾಯಿತು. ಇದು ಭಾರತಕ್ಕೆ ಬಿಲ್ ಗೇಟ್ಸ್‌ರ ಎರಡನೇ ಭೇಟಿ. ಈ ಮೊದಲು ಏಪ್ರಿಲ್ 1997ರಲ್ಲಿ ಭಾರತಕ್ಕೆ ಭೇಟಿ ನೀಡಿದಾಗ, ಭಾರತದ ಐಟಿ ರಾಜಧಾನಿ ಎಂದೇ ಪ್ರಸಿದ್ಧವಾಗಿರುವ ಬೆಂಗಳೂರಿಗೆ ಭೇಟಿ ನೀಡದೆ ಕೇವಲ ಹೈದರಾಬಾದಿಗೆ ಭೇಟಿ ನೀಡಿ ಬಿಲ್ ಗೇಟ್ಸ್ ಬೆಂಗಳೂರಿನ ಐಟಿ ಸಮುದಾಯಕ್ಕೆ ನಿರಾಶೆಯನ್ನುಂಟುಮಾಡಿದ್ದರು. ಆದರೆ ಈ ಬಾರಿ ಹಾಗಾಗಲಿಲ್ಲ. ತಮ್ಮ ನಾಲ್ಕು ದಿನಗಳ ಭೇಟಿಯಲ್ಲಿ ವಿಶೇಷವಾಗಿ ಒಂದು ದಿನವನ್ನು ಬೆಂಗಳೂರಿನ ಭೇಟಿಗೆ ಬಿಲ್ ಗೇಟ್ಸ್ ಮೀಸಲಿಟ್ಟಿದ್ದರು.

ಬಿಲ್ ಗೇಟ್ಸ್ ಕಳೆದ ಬಾರಿ ಭೇಟಿ ನೀಡಿದ್ದಾಗ, ಇಂಟರ್‌ನೆಟ್ ಚಳವಳಿ ಆಗಷ್ಟೇ ಉಚ್ಛ್ರಾಯ ಸ್ಥಿತಿಯತ್ತ ಏರುತ್ತಿತ್ತು. ಭಾರತ, ಪ್ರಪಂಚದ ಐಟಿ ಶಕ್ತಿಯಾಗಬೇಕಿದ್ದರೆ ಅದು ಇಂಟರ್‌ನೆಟ್‌ಅನ್ನು ಸಮರ್ಥವಾಗಿ ಬೆಳೆಸಬೇಕು ಎಂದೂ ಅವರು ಅಂದು ಕರೆಯಿಟ್ಟಿದ್ದರು. ಹಾಗೆಯೇ ಭಾರತವು ಮುಂದುವರಿಯಿತು ಕೂಡ. ಆದರೆ, ಐದು ವರ್ಷಗಳ ನಂತರ ಈಗ ಐಟಿ ಬೆಳವಣಿಗೆಯ ಸ್ವರೂಪ ಸಂಪೂರ್ಣ ಬದಲಾಗಿದೆ. ಇಂಟರ್‌ನೆಟ್ ಒಂದು ಅತಿ ಮುಖ್ಯ ಸಾಧನವಾಗಿ ಹೊರಹೊಮ್ಮಿದ್ದರೂ ಇಂಟರ್‌ನೆಟ್ ಆಧಾರಿತ ಡಾಟ್‌ಕಾಮ್ ಉದ್ದಿಮೆಗಳು ಸೋಲನುಭವಿಸಿವೆ. ಇಂದು ಮೌಲ್ಯಾಧಾರಿತ ಐಟಿ ಸೇವೆಗಳು ಮತ್ತು ಗ್ರಾಹಕ ಕೇಂದ್ರಿತ ಸೇವಾ ಕಾರ್ಯಗಳು ಹೆಚ್ಚಾಗಿವೆ. ಇಂತಹ ಸಂದರ್ಭದಲ್ಲಿ ಬಿಲ್ ಗೇಟ್ಸ್‌ರ ಭಾರತ ಭೇಟಿ ವಿಶೇಷ ಮಹತ್ವವನ್ನು ಪಡೆದುಕೊಂಡಿತ್ತು.

ಈ ಬಾರಿ ಬಿಲ್ ಗೇಟ್ಸ್‌ರ ಭಾರತ ಭೇಟಿ ಐಟಿಗೆ ಮೀಸಲಾಗಿರಲಿಲ್ಲ. ಹಾಗೆಂದು ಅವರೇನೂ ತಮ್ಮ ಸಂಸ್ಥೆ ಮೈಕ್ರೋಸಾಫ್ಟ್‌ನ ಉತ್ಪನ್ನಗಳನ್ನು ಪ್ರಚುರಪಡಿಸುವ ಯಾವುದೇ ಅವಕಾಶವನ್ನು ಕಳೆದುಕೊಳ್ಳಲಿಲ್ಲ. ಜಗತ್ತಿನ ಅತಿ ಹೆಚ್ಚು ಏಡ್ಸ್ ರೋಗಿಗಳನ್ನು ಹೊಂದಿರುವ ದೇಶಗಳಲ್ಲಿ ಒಂದಾದ ಭಾರತಕ್ಕೆ ಈ ಭಯಾನಕ ರೋಗವನ್ನು ಎದುರಿಸಲು ಬೇಕಾದ ಆರ್ಥಿಕ ನೆರವನ್ನು ನೀಡುವ ಉದ್ದೇಶದಿಂದ ಬಿಲ್ ಗೆಟ್ಸ್ ಭಾರತಕ್ಕೆ ಭೇಟಿ ನೀಡಿದ್ದರು. ಸುಮಾರು 100 ಮಿಲಿಯ ಡಾಲರ್‌ಗಳಷ್ಟು ಆರ್ಥಿಕ ನೆರವನ್ನು ಏಡ್ಸ್ ರೋಗದ ನಿವಾರಣೆಗೆ ಬಿಲ್ ಗೇಟ್ಸ್ ನೀಡಿದರು. ವಿಶ್ವದ ಅತಿ ಶ್ರೀಮಂತ ವ್ಯಕ್ತಿಯಾದ ಗೇಟ್ಸ್ ಅವರ ಖಜಾನೆಯಲ್ಲಿ ತಮಗೂ ಪಾಲು ಬೇಕೆಂದು ಸಾಲುಗಟ್ಟಿದ ಭಾರತದ ಅನೇಕ ರಾಜ್ಯಗಳ ಮುಖ್ಯಮಂತ್ರಿಗಳಿಗೆ ನಿರಾಶೆಯೇನೂ ಆಗಲಿಲ್ಲ. ಬೆಂಗಳೂರಿಗೆ ಭೇಟಿ ನೀಡಿದ ಸಮಯದಲ್ಲಿ ಕರ್ನಾಟಕ ಸರ್ಕಾರಕ್ಕೂ, ಮೈಕ್ರೋಸಾಫ್ಟ್ ಸಂಸ್ಥೆಯ ಡೆವಲಪ್‌ಮೆಂಟ್ ಸೆಂಟರನ್ನು ಹೊಂದಿರುವ ಹೈದರಾಬಾದಿಗೆ ಭೇಟಿ ನೀಡಿದಾಗ ಆಂಧ್ರ ಪ್ರದೇಶ ಸರ್ಕಾರಕ್ಕೆ ಮತ್ತು ಮುಂಬೈಗೆ ಭೇಟಿ ನೀಡಿದಾಗ ಮಹಾರಾಷ್ಟ್ರ ಸರ್ಕಾರದ ಮುಖ್ಯಮಂತ್ರಿಗಳಿಗೆ ಮಿಲಿಯಗಟ್ಟಲೆ ಡಾಲರ್‌ಗಳ ದೇಣಿಗೆಯನ್ನು ನೀಡುವುದಾಗಿ ಘೋಷಿಸಿದ ಬಿಲ್‌ಗೇಟ್ಸ್ - ತಮ್ಮ ಸಂಸ್ಥೆಯ ಉತ್ಪನ್ನಗಳಿಗೆ ಇನ್ನಷ್ಟು ಬೇಡಿಕೆಯನ್ನು ಹೆಚ್ಚಿಸಿಕೊಂಡರು. ಹಾಗೆಯೇ, ತಮ್ಮ ಈ ಎಲ್ಲಾ ಹೊಂದಾಣಿಕೆಗಳಿಂದ ತಾವೆಷ್ಟು ಉತ್ತಮ ವ್ಯಾಪಾರಸ್ಥ ಎಂದು ಸಾಬೀತುಪಡಿಸಿದರು.

ಸುಮಾರು 20 ವರ್ಷಗಳ ಹಿದೆ ಆ್ಯಪಲ್ ಸಂಸ್ಥೆಯ ಗ್ರಾಫಿಕ್ ಯೂಸರ್ ಇಂಟರ್‌ಫೇಸನ್ನು ಯಥಾವತ್ತಾಗಿ ವಿಂಡೋಸ್ ಓಎಸ್‌ನಲ್ಲಿ ಅಚ್ಚೊತ್ತಿಸಿ, ಮಿಲಿಯಗಟ್ಟಲೆ ಹಣ ಮಾಡಿದ ಬಿಲ್‌ಗೇಟ್ಸ್ ತಮ್ಮ ಆಚಾಣಾಕ್ಷತೆ, ನಿಪುಣತೆಗಳನ್ನು ಇನ್ನೂ ಉಳಿಸಿಕೊಂಡಿದ್ದಾರೆ. ಮೈಕ್ರೋಸಾಫ್ಟ್ ಸಂಸ್ಥೆ ತನ್ನ ಉತ್ಪನ್ನಗಳನ್ನು ಮಾರಾಟ ಮಾಡುವಲ್ಲಿ ಬಳಸಿದ ನವೀನ ತಂತ್ರಗಳು ಇಡೀ ವಿಶ್ವವನ್ನೇ ಬೆರಗುಗೊಳಿಸಿತ್ತು. ಇಂದಿಗೂ ಈ ತಂತ್ರಗಳನ್ನು ಯಶಸ್ವಿಯಾಗಿ ಬಳಸುತ್ತಿರುವುದಕ್ಕೊಂದು ನಿದರ್ಶನ ಬಿಲ್ ಗೇಟ್ಸ್‌ರ ಬಾರಿಯ ಭಾರತ ಭೇಟಿ.

ಮೈಕ್ರೋಸಾಫ್ಟ್ ಸಂಸ್ಥೆಯು ತನ್ನ ಲಾಭದ ಶೇ.85ರಷ್ಟು ಭಾಗ ವಿಂಡೋಸ್ ಆಪರೇಟಿಂಗ್ ಸಿಸ್ಟಮ್ಸ್‌ನ ಮಾರಾಟದಿಂದ ಗಳಿಸಿದೆ ಎಂಬ ಸುದ್ದಿ ಮೈಕ್ರೋಸಾಫ್ಟ್ ಸಂಸ್ಥೆಯ ಮುಂದುವರಿದ ನೈಪುಣ್ಯಕ್ಕೆ ಜ್ವಲಂತ ಸಾಕ್ಷಿಯಾಗಿದೆ.

ಜೆ.ಪಿ. ವಿನಯಬಾಬು